ಆ) ಇವುಗಳಲ್ಲಿ ಯಾವುದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆ.

ಇ) ಉಳಿದವುಗಳ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ 1997-98ನೆ ಸಾಲಿನಲ್ಲಿ 3 ಏತ ನೀರಾವರಿ ಯೋಜನೆಗಳು ಆಯವ್ಯಯದಲ್ಲಿ ಸೇರಿರುತ್ತವೆ.

1. ತುಂಗಾನದಿಗೆ ಹೊಸಹಳ್ಳಿ ಹತ್ತಿರ ಏತ ನೀರಾವರಿ ಯೋಜನೆ

2. ಬಾಳೇಬೈಲು ಏತ ನೀರಾವರಿ ಯೋಜನೆ

3. ಮೀನುಗುಂದ ಏತ ನೀರಾವರಿ ಯೋಜನೆ

ಈ ಮೂರು ಏತ ನೀರಾವತಿ ಯೋಜನೆಗಳು 1996-97 ನೇ ಸಾಲಿನಿಂದ ಆಯವ್ಯಯದಲ್ಲಿ ಮುಂದುವರಿಯುತ್ತಿವೆ.

ಆ) ಇವುಗಳಲ್ಲಿ ಮೀನುಗುಂದ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಯನ್ನು 30.00 ಲಕ್ಷ ರೂ. ಗಳಿಗೆ ನೀಡಲಾಗಿರುತ್ತದೆ.

ಇ) ಮೀನುಗುಂದ ಏತ ನೀರಾವರಿ ಯೋಜನೆಯ ಟೆಂಡರನ್ನು ಕರೆಯಲಾಗಿದ್ದು, ಟೆಂಡರ್‌ನ್ನು ಪರಿಶೀಲಿಸಲಾಗುತ್ತಿದ್ದು, ಟೆಂಡರನ್ನು ಪರಿಶೀಲಿಸಲಾಗುತ್ತಿದ್ದು, ಇತ್ಯರ್ಥಗೊಳಿಸಿದ ನಂತರ ಕೆಲಸ ಪ್ರಾರಂಭಿಸಲಾಗುವುದು. ಹೊಸಹಳ್ಳಿ ಏತ ನೀರಾವರಿ ಯೋಜನೆಯ ಅಂದಾಜನ್ನು 106.00 ಲಕ್ಷ ರೂ. ಗಳಿಗೆ ತಯಾರಿಸಿದ್ದು, ಶೇ. 30 ರಷ್ಟು ಅನುದಾನದ ಲಭ್ಯತೆ ಮೇಲೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರು ಇಲಾಖಾ ಅಧಿಕಾರಿ ಮತ್ತು ಸಿಬ್ಬಂದಿಯವರಿಂದ ಶೋಷಣೆ

262 (527) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನೂತನವಾಗಿ ವಿದ್ಯುತ್ ಸಂಪರ್ಕ ಪಡೆಯಲು ಬಳಕೆದಾರರ ಅರ್ಜಿ ಹಾಕುವ ಹಾಗೂ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಗುತ್ತಿಗೆದಾರನ ಕಡ್ಡಾಯ ಹಾಜರಾತಿ ಏನಾಯಿತಿ ಮಾಡಿ ಆದೇಶ ಹೊರಡಿಸಲಾಗಿದೆಯೇ,

ಆ) ಈ ರೀತಿ ಆದೇಶ ಹೊರಡಿಸಲು ಕಾರಣವೇನು? ಈ ರೀತಿಯ ಆದೇಶದಿಂದಾಗಿ ತಾಂತ್ರಿಕವಾಗಿ ಅಮಾಯಕರಾದ ಗ್ರಾಹಕರು ಇಲಾಖಾ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಶೋಷಣೆ ಒಳಗಾಗುವುದಿಲ್ಲವೇ,

ಇ) ಈ ರೀತಿ ಕಾಯ್ದೆ ತರುವ ಮುನ್ನ ಇದನ್ನು ಯಾವ ಸಮಿತಿ ಶಿಫಾರಸ್ಸು ಮಾಡಿದೆ.

ಈ) ರಾಜ್ಯದಲ್ಲಿ ಗ್ರಾಹಕರ ಮತ್ತು ಇಲಾಖೆಯ ನಡುವೆ ಬಾಂದವ್ಯ ಬೆಳೆಸುತ್ತಿದ್ದು, ಗ್ರಾಹಕರಿಗೆ ಸಹಕಾರಿಯಾಗಿದ್ದು ನೋಂದಾಯಿತ ಗುತ್ತಿಗೆದಾರರ ಸಂಖ್ಯೆ ಎಷ್ಟು ಇವರ ಸಮಸ್ಯೆಯನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿದೆಯೇ?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಹಾಲಿ ಜಾರಿಯಲ್ಲಿರುವ ನಿಯಮದ ಪ್ರಕಾರ ಅರ್ಜಿದಾರನು ತನ್ನ ಆವರಣಕ್ಕೆ ವಿದ್ಯುತ್ ಸರಬರಾಜನ್ನು ಮಾಡಬೇಕೆಂದು ಅರ್ಜಿಯನ್ನು ಸಲ್ಲಿಸಿದಾಗ ಸ್ಥಳ ಪರಿಶೀಲನೆಯನ್ನು ಮಂಡಳಿಯ ಇಂಜಿನಿಯರು ಅರ್ಜಿದಾರ : ಗುತ್ತಿಗೆದಾರ : ಸೂಪರ್‌ವೈಸರ್ ಇವರೊಡನೆ ಜಂಟಿಯಾಗಿ ಮಾಡುತ್ತಾರೆ. ಈ ಸ್ಥಳ ಪರಿಶೀಲನೆಯಲ್ಲಿ ಸದರಿ ಆವರಣಕ್ಕೆ ವಿದ್ಯುತ್ ಸರಬರಾಜನ್ನು ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತದೆ ಮತ್ತು ಟರ್‌ಮಿನಲ್ ಪೋಲ್, ಮೀಟರ್ ಬೋರ್ಡ್, ಇವುಗಳನ್ನು ಹಾಕುವ ಸ್ಥಳದ ಬಗ್ಗೆ ಪರಿಶೀಲಿಸಲಾಗುತ್ತದೆ. ಹಾಗೂ ಕೇಬಲ್‌ನ ಗಾತ್ರ ಇತ್ಯಾದಿಗಳ ಬಗ್ಗೆ ನಿರ್ಧರಿಸಲು ಸ್ಥಳ ಪರಿಶೀಲನೆ ಮಾಡಲಾಗುತ್ತದೆ. ಈ ಕ್ರಮದಿಂದಾಗಿ ಸಮನ್ವಯಗೊಳಿಸುವಲ್ಲಿ ಸಮಸ್ಯೆ ಉಂಟಾಗುತ್ತಿದ್ದು, ಇದು ಅರ್ಜಿಗಳ ಪರಿಷ್ಕರಣೆಯಲ್ಲಿ ವಿಳಂಬಕ್ಕೆ ಕಾರಣವಾಗುತ್ತಿದೆ. ಈ ಪ್ರಾರಂಭಿಕ ಹಂತದಲ್ಲಿ ಅರ್ಜಿದಾರನು ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಕೆಲವೊಮ್ಮೆ ವಿವಿಧ ವಿಷಯಗಳ ಬಗ್ಗೆ ಅರ್ಜಿದಾರನೊಡನೆ ಸಮಾಲೋಚನೆ ನಡೆಸುತ್ತಿರಲಿಲ್ಲ. ಭಾರತೀಯ ವಿದ್ಯುತ್ ನಿಯಮಾವಳಿ ಪ್ರಕಾರ ಮೀಟರ್ ಮತ್ತು ಮೀಟರ್‌ಗಳ ಸೀಲನ್ನು ನಿರ್ವಹಿಸುವುದು ಮತ್ತು ರಕ್ಷಿಸುವುದು ವಿದ್ಯುತ್ ಬಳಕೆದಾರನ ಜವಾಬ್ದಾರಿಯಾಗಿದೆ. ಆದ್ದರಿಂದ ಮೀಟರ್‌ಗಳ ಸ್ಥಳವನ್ನು ನಿಗದಿ ಪಡಿಸುವಾಗ ಅರ್ಜಿದಾರನೊಡನೆ ಸಮಾಲೋಚಿಸುವುದು ಸೂಕ್ತವೆಂದು ಪರಿಗಣಿಸಲಾಗುತ್ತಿದೆ. ಈ ಕಾರಣಕ್ಕಾಗಿ ಕ.ವಿ. ಮಂಡಳಿಯು ತನ್ನ ವಿದ್ಯುತ್ ನಿಯಮಾವಳಿಗಳನ್ನು ಸೂಕ್ತ ತಿದ್ದುಪಡಿ ಮಾಡಿ ಮೀಟರ್ ಬೋರ್ಡ್‌ನ ಸ್ಥಳವನ್ನು ನಿಗದಿಪಡಿಸಲು ಮಾಡಲಾಗುವ ಜಂಟಿ ಪರಿಶೀಲನೆಯನ್ನು ಅರ್ಜಿದಾರನ ಜೊತೆ ಮಾಡುವಂತೆ ತಿಳಿಸಿದೆ. ''ಗುತ್ತಿಗೆದಾರ: ಸೂಪರ್‌ವೈಸರ್ ಈ ಪದಗಳನ್ನು ತೆಗೆದು ಹಾಕಲಾಗಿದೆ. ಮಂಡಳಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡುವಾಗ ಅರ್ಜಿದಾರನ ಉಪಸ್ಥಿತಿ ಇದ್ದರೆ ಸಾಕು. ಒಂದು ವೇಳೆ ಅರ್ಜಿದಾರನು, ಗುತ್ತಿಗೆದಾರನು ಸಹ ಈ ಉದ್ದೇಶಕೋಸ್ಕರ ತನ್ನ ಜೊತೆಯಲ್ಲಿ ಇರಬೇಕೆಂದು ಅಪೇಕ್ಷಿಸಿದಲ್ಲಿ ಗುತ್ತಿಗೆದಾರರ ಜೊತೆಯಲ್ಲಿ ಕರೆದುಕೊಂಡು ಬರಬಹುದು. ಆದರೆ ಈ ಉದ್ದೇಶಕ್ಕಾಗಿ ಗುತ್ತಿಗೆದಾರ ಅಥವಾ ಅವರ ಸೂಪರ್‌ವೈಸರ್ ಇರಲೇ ಬೇಕೆಂದು ಕಡ್ಡಾಯವೇನು ಇಲ್ಲ.

ಆ) ಇದಕ್ಕೆ ಕಾರಣಗಳು.

1) ಅರ್ಜಿದಾರನು ಪ್ರಾರಂಭಿಕ ಹಂತದಲ್ಲಿ ಅಂದರೆ ಅರ್ಜಿ ನಿರ್ವಹಣೆ ಸ್ಥಳ ಪರಿಶೀಲನೆ ಇತ್ಯಾದಿ ಹಂತದಲ್ಲಿ ಗುತ್ತಿಗೆದಾರನನ್ನು ಇಟ್ಟು ಕೊಳ್ಳಬೇಕಾಗಿರುವುದಿಲ್ಲ. ಕ.ವಿ. ಮಂಡಳಿಯಿಂದ ವಿದ್ಯುತ್ ಮಂಜುರಾತಿಯನ್ನು ಪಡೆದ ನಂತರ ಅಂತರಿಕ ವೈರಿಂಗ್‌ನ್ನು ಮಾಡುವ ಸಲುವಾಗಿ ವಿದ್ಯುತ್ ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅರ್ಜಿದಾರನು ತೀರ್ಮಾನಿಸ ಬೇಕಾಗುತ್ತದೆ. ಇದರಿಂದಾಗಿ ಈ ಪದ್ಧತಿಯು ಸರಳೀಕರಣಗೊಳ್ಳುವುದರಲ್ಲದೆ ಮಧ್ಯವರ್ತಿಗಳ ಪಾತ್ರವನ್ನು ನಿವಾರಿಸುತ್ತದೆ.

2) ವಿದ್ಯುತ್ ಸರಬರಾಜಿನ ಸಾಧ್ಯತೆ ಅಥವಾ ಮೀಟರ್ ಬೋರ್ಡ್‌ನ ಸ್ಥಳವನ್ನು ನಿಗದಿಪಡಿಸುವಲ್ಲಿ ವಿದ್ಯುತ್ ಗುತ್ತಿಗೆದಾರ ಅಥವಾ ಆತನ ಸೂಪರ್‌ವೈಸರ್ ಯಾವ ಪಾತ್ರವನ್ನು ವಹಿಸುವುದಿಲ್ಲ. ಇದು ಕ.ವಿ. ಮಂಡಳಿಯ ಇಂಜಿನಿಯರುಗಳ ಮಾಡುವ ಕೆಲಸವಾಗಿದೆ.

3) ವಿದ್ಯುತ್ ಸರಬರಾಜನ್ನು ಪಡೆಯುವಲ್ಲಿ ಜಾರಿಯಲ್ಲಿರುವ ಪದ್ದತಿಯ ಸರಳೀಕರಣ ಮತ್ತು ಉತ್ತಮ ಸಮನ್ವಯ

ಇ) ಕ.ವಿ. ಮಂಡಳಿಯ ಆಂತರಿಕ ನಿವಾರಣಾ ಸಮಿತಿ (ಇಂಟರ್‌ನಲ್) ಮ್ಯಾನೇಜ್‌ಮೆಂಟ್ ಕಮಿಟಿ) ಯ ಚರ್ಚೆಯ ನಂತರ ಸಾರ್ವಜನಿಕರ ಹಿತಾಸಕ್ತಿಗೆ ನೀಡಿದ (ಕ್ಷೇತ್ರ ಸಿಬ್ಬಂದಿಗಳೊಡನೆ ವಿವರವಾಗಿ ಚರ್ಚಿಸಿದ ನಂತರ)

ಈ) ಅಂತರಿಕ ವೈರಿಂಗನ ಕೆಲಸವನ್ನು ಮಾಡುವ ಸಲುವಾಗಿ ಸುಮಾರು 20,000 ನೋಂದಾಯಿತ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರು ಇದ್ದಾರೆ. ಈ ತಿದ್ದುಪಡಿಯೊಂದಿಗೆ ಅಥವಾ ಹೊಸಅರ್ಜಿ ನಮೂನೆಯೊಂದಿಗೆ ಯಾವುದೇ ರೀತಿಯಲ್ಲಿ ಗುತ್ತಿಗೆದಾರರ ಆಸಕ್ತಿಗೆ ದಕ್ಕೆ ಉಂಟಾಗುವುದಿಲ್ಲ. ಈ ಹಿಂದೆ ಮಾಡುವಂತೆ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರು ತಮ್ಮ ಕೆಲಸದ ನಿರ್ವಹಣೆಯನ್ನು ಮುಂದುವರಿಸುತ್ತಾರೆ. ಮಧ್ಯವರ್ತಿಗಳಂತೆ ನಿರ್ವಹಿಸುತ್ತಿದ್ದ ಪಾತ್ರವನ್ನು ಮಾತ್ರ ಕಡಿಮೆಗೊಳಿಸಲಾಗಿದೆ. ಅರ್ಜಿಗಳು ಶೀಘ್ರ ಪರಿಸ್ಕರಣಕ್ಕಾಗಿ ಕ.ವಿ. ಮಂಡಳಿಯ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುತ್ತದೆ.

ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡದವರಿಗೆ ವಿದ್ಯುತ್ ಸೌಲಭ್ಯ

263 (322) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96, 1996-97 ನೇ ಸಾಲಿನಲ್ಲಿ ಹಾಗೂ 1997-98ರ ಜನವರಿವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ನಿಗದಿಪಡಿಸಿದ ಹಣ ಎಷ್ಟು ಹಾಗೂ ಖರ್ಚಾದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಈ ಪೈಕಿ ದಕ್ಷಿಣ ಕನ್ನಡ ಜಿಲ್ಲೆಗೆ ವೆಚ್ಚ ಮಾಡಲಾಗಿರುವ ಹಣ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಪ.ಜಾ/ಪ.ಪಂ. ಬಾಕಿ ನೀಡಿರುವ ವಿದ್ಯುತ್ ಸೌಲಭ್ಯದ ತಾಲ್ಲೂಕುವಾರು ವಿವರ ನೀಡುವುದು.

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯಸಚಿವರು) :

ಅ) 1995-96, 1996-97 ಹಾಗೂ 1997-98ನೇ ಸಾಲುಗಳಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಸಲುವಾಗಿ ನಿಗದಿಪಡಿಸಿದ ಹಾಗೂ ಖರ್ಚು ಮಾಡಿದ ಹಣದ ವರ್ಷವಾರು ವಿವರಗಳು ಈ ರೀತಿ ಇವೆ.